ಈ ಆಲ್ಕೋಮೀಟರು, ಪ್ರಿಂಟರುಗಳನ್ನೆಲ್ಲಾ ಇಟ್ಕಂಡು ನಾವ್ಯಾಕೆ ಬೀದೀಲಿ ನಿಲ್ಬೇಕಿತ್ತು? ಯಾರಾದ್ರೂ ಕುಡುಕರು ನಾವು ಕುಡಿದಿದ್ದೀವಿ ಬನ್ನಿ ಸಾ, ನಮ್ಮುನ್ನ ಹಿಡ್ಕಂಡು ಹೋಗಿ ಅಂತ ಬೋರ್ಡು ಹಾಕಿಕೊಂಡು ಓಡಾಡ್ತರಾ? ಎಲ್ಲಾ ಗಾಡಿಗಳನ್ನ ನಾವು ತಡೀಲೇಬೇಕು, ಊದಿಸ್ಲೇಬೇಕು. ಜವಾಬ್ದಾರಿ ಇರೋ ಪಬ್ಲಿಕ್ಕು ನೀವು. ನಮ್ಮೊಂದಿಗೆ ಕೊಆಪ್ರೇಟು ಮಾಡ್ಬೇಕಲ್ವಾ?' ಅಂತ ಅವರನ್ನು ಸಮಾಧಾನಿಸುತ್ತಿದ್ದೆವು.

ಕೆಲವು ಜಾಣ ವ್ಯಸನಿಗಳಿದ್ದರು. ಅವರು ನಮ್ಮ ಮನ ಕರಗಿಸುವುದಕ್ಕೆ ಇನ್ನಿಲ್ಲದಂತೆ ಪ್ರಯತ್ನಿಸುತ್ತಿದ್ದರು. 'ನಿಮ್ಗೇನು ಗೊತ್ ಸ್ವಾಮಿ ನಮ್ ಕಷ್ಟ, ಮನೇಲಿ ಅವ್ವಂಗೆ ಹುಷಾರಿಲ್ಲ, ಮೈತುಂಬಾ ಸಾಲ ಮಾಡ್ಕಂಡಿದೀನಿ. ಕೈನಾಗೆ ಕೆಲ್ಸ ಇಲ್ಲ, ಮಕ್ಳ ಸ್ಕೂಲ್ ಫೀಸು ಬ್ಯಾರೆ ಕಟ್ಟಬೇಕು.. ಎಲ್ಲ ಸಮಸ್ಯೆಗಳೇ. ರಾತ್ರಿ ಟೈಮು ನಿದ್ದೇನೆ ಬರಾದಿಲ್ಲ. ಮರಿಯಾಕೆ ಅಂತ ಸ್ವಲ್ಪ ತಗತೀನಷ್ಟೆ. ಅದೇ ತಪ್ಪಾ ಸಾ? ನಾವೇನು ದುಡ್ಡಿರೋ ಜನಾ ಅಲ್ಲ. ಷೋಕಿಗೆ ಕುಡಿಯೋರಲ್ಲ. ಏನಾದ್ರೂ ನಿಮ್ಮಂತೋರಿಗೆ ನಮ್ ಮೇಲೆ ಕರುಣೇನೆ ಇರಂಗಿಲ್ಲ ಬುಡಿ ಸಾರ್...' ಅಂತ ನಮ್ಮ ದಯೆ ದಾಕ್ಷಿಣ್ಯಗಳನ್ನೆಲ್ಲಾ ಅಳತೆ ಹಾಕಿ ತೂಗುತ್ತಿದ್ದರು.

ಕೆಲವು ಬಡಾಯಿ ವೀರರು ಬರುಬರುತ್ತಲೇ 'ನಾವು ಯಾರ್ ಗೊತ್ತೇನ್ರೀ? ಯಾರೋ ಇವ್ನಿಗೆ ಕೈಹಾಕ್ದಂಗೆ ಆಕ್ತೀರಲ್ಲ? ಇಂತಿಂಥೋರು ನನಗೆ ಬಾಳಾ ಬೇಕಾದೋರು. ಬೇಕಾದ್ರೆ ಫೋನು ಮಾಡಿಕೊಡ್ತೀನಿ ಮಾತಾಡಿ' ಅನ್ನುತ್ತಾ ಫೋನು ತೆಗೆದು ತೋರುತ್ತಾ ಮೊದಲ ದಾಳ ಉರುಳಿಸುತ್ತಿದ್ದರು. ಏನೇನೋ ನಂಬರುಗಳನ್ನು ಒತ್ತಿ ಫೋನು ಮಾಡುವವರಂತೆ ನಟಿಸಿ 'ಥತ್ ಇದರವ್ನ, ಕರೆಕ್ಟು ಟೈಮಿಗೆ ಸಿಗಾದಿಲ್ಲ. ನೋಡಿ ಸಾ, ಅರ್ಜೆಂಟಲ್ಲಿದೀನಿ ಏನಾದ್ರೂ ಮಾಡಕಾಯ್ತದಾ? ಏರ್‌ಪೋರ್ಟಿಗೆ ಬ್ಯಾರೆ ಹೋಗ್ಬೇಕು. ಇಂತಿಂಥೋರು ಬತ್ತಾವ್ರೆ. ನಾನೇ ಹೋಗಿ ರಿಸೀವು ಮಾಡ್ಬೇಕು ಪ್ಲೀಸ್...' ಅನ್ನುತ್ತಾ ಒಂದು ಸ್ಟೆಪ್ಪು ಕೆಳಗಿಳಿದು ಎರಡನೇ ದಾಳ ಉರುಳಿ ಬಿಡುತ್ತಿದ್ದರು.

ಈ ಎಲ್ಲ ನಾಟಕ ಏಕಪಾತ್ರಾಭಿನಯಗಳನ್ನು ವಾರವಾರವೂ ನೋಡಿ ಸಾಕಾಗಿದ್ದ ನಾವು ಯಾವುದಕ್ಕೂ ಸೊಪ್ಪು ಹಾಕುತ್ತಿರಲಿಲ್ಲ. ಕೊನೆಯ ಯತ್ನವೆಂಬಂತೆ ಸೆಲೆಬ್ರಿಟಿಗಳ, ಅಧಿಕಾರಸ್ಥರ ವಿಸಿಟಿಂಗ್ ಕಾರ್ಡುಗಳನ್ನು ಕಿಸೆಯಿಂದ ತೆಗೆಯುತ್ತಿದ್ದರು. 'ಯಾವಾಗಾದ್ರೂ ಬೇಕಾಯ್ತದೆ ತಡೀಲಾ,' ಅಂತ ಅವನ್ನೆಲ್ಲಾ ಮೊದಲೇ ಸಂಗ್ರಹ ಮಾಡಿ ಇಟ್ಟುಕೊಂಡಿರುತ್ತಿದ್ದರೋ ಏನೋ? 'ಸಾರ್ ನಿಮ್ಗತ್ರ ಮಾತ್ರ ಯೋಳ್ತಾ ಇದೀನಿ ನಾನು ಇಂಥೋರಿಗೆ ಬಾಳಾ ಕ್ಲೋಸು. ಯಾವಾಗಾದ್ರು ಬಂದ್ರೆ ನಿಮಗೂ ಪರಿಚಯ ಮಾಡ್‌ಕೊಡ್ತೀನಿ. ಸದ್ಯಕ್ಕೆ ನಮ್ ಕೇಸು ಒಂಚೂರು ನೋಡಿ ಸಾ...' ಅಂತ ರಿಕ್ವೆಸ್ಟಿಗೆ ಇಳಿಯುತ್ತಿದ್ದರು.

ಎಲ್ಲ ಸರ್ಕಸ್ಸುಗಳೂ ವಿಫಲವಾಗಿ ನೋಟಿಸು ಕೈಗೆ ಬಂದ ಮೇಲೆ ಇನ್ನು ನಮ್ಮ 'ಖೇಲ್ ಖತಂ' ಎಂಬುದು ಅವರಿಗೆ ಗೊತ್ತಾಗುತ್ತಿತ್ತು. ಆದರೂ ಪ್ರಯತ್ನ ಮಾಡುವುದರಲ್ಲೇನು? 'ಸಾರ್ ನಾಳೇನೆ ಬಂದು ಫೈನು ಕಟ್‌ಬುಡ್ತೀನಿ, ಗಾಡಿ ಒಂದ್ ಬುಟ್ಬಿಡಿ... ಬೆಳಗ್ಗೇನೆ...' ಅನ್ನುತ್ತ ಪ್ಲೇಟು ತಿರುವುತ್ತಿದ್ದರು.

ಅವರಿವರಿಗೆ ಮೊಬೈಲು ಹಚ್ಚಿಯೂ ಬಿಡುತ್ತಿದ್ದರು ಕೆಲವರು. ತಮ್ಮದೇನು ತಪ್ಪಿಲ್ಲವೇನೋ? ಬಾಯಿಗೆ ಲಾಲಿಪಪ್ ಇಟ್ಟರೂ ಚೀಪಲು ಬಾರದ ಅಮಾಯಕರೇನೋ? ಅನ್ನುವಂತೆ ಆ ಕಡೆಯವರಿಗೆ ಪೀಠಿಕೆ ಹಾಕಿ ಕಿವಿಯನ್ನೂದಿ ನಂತರ ಮಾತಾಡಲು ನಮಗೆ ಫೋನು ಕೊಡುತ್ತಿದ್ದರು. ಯಾರಯ್ಯಾ ಆ ಕಡೆ ಇರೋದು? ಅಂತ ಕೇಳಿದರೆ, ಮೊದ್ಲು ಮಾತಾಡಿ ಸಾ. ಮಾತಾಡಿ, ಆಮೇಲ್ ನೋಡಿ ಎನ್ನುವಂತೆ ವರ್ತಿಸಿ ನಮ್ಮಲ್ಲಿ ಆತಂಕ ಹುಟ್ಟುಹಾಕಲು ಯತ್ನಿಸುತ್ತಿದ್ದರು. ನಾವು